




# ಥಾಣೆಯ ಪಾರಂಪರಿಕ ಲೋಕೊಮೋಟಿವ್

ಕಳೆದೆರಡು ದಶಕಗಳಿಂದ ಮುಂಬೈಯಲ್ಲಿ ನೆಲೆಸಿದ್ದರೂ, ಇಲ್ಲಿನ ಥಾಣೆ ಪಟ್ಟಣದ ಲೋಕಲ್ ರೈಲು ನಿಲ್ದಾಣದ ಪ್ಲಾಟ್‌ಫಾರ್ಮ್ ನಂಬರ್ 1ರತ್ತ ಸುಳಿಯುವ ಅವಶ್ಯಕತೆ ಬಂದಿರಲಿಲ್ಲ. ಈಚೆಗೆ ಅಕಸ್ಮಾತ್ತಾಗಿ ಅತ್ತ ಹೋದಾಗ ಪ್ಲಾಟ್‌ಫಾರಂ ಹೊರಗೆ ಈ ಪುರಾತನ ಉಗಿಬಂಡಿ ಎಂಜಿನ್ (ಸ್ಟೀಮ್ ಲೋಕೊಮೋಟಿವ್) ಗಮನಸೆಳೆಯಿತು. ಎಫ್–717 ನ್ಯಾರೋಗೇಜ್ ಉಗಿಬಂಡಿಯ ಭಾಗವಾಗಿರುವ ಇದನ್ನಿಲ್ಲಿ ವಿಶೇಷವಾಗಿ ಸ್ಥಿರ ಪ್ರದರ್ಶನಕ್ಕೆ ಇಡಲಾಗಿದೆ. ಎರಡೂವರೆ ಅಡಿ ಅಗಲದ ನ್ಯಾರೋಗೇಜ್ ಹಳಿಗಳ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಈ ಲೋಕೊಮೋಟಿವ್, ಬಾರ್ಸಿ ಲೈಟ್ ರೈಲ್ವೆ (ಬಿಎಲ್‌ಆರ್) ಜಾಲದ ಒಂದು ಪ್ರಮುಖ ಬಂಡಿಯಾಗಿತ್ತು. ಮೂಲತಃ 1928ರಲ್ಲಿ, ಬಾರ್ಸಿ ಲೈಟ್ ರೈಲ್ವೆಗಾಗಿ ಯು.ಕೆ.ಯ ಮ್ಯಾಂಚೆಸ್ಟರ್‌ನಲ್ಲಿ ಇದನ್ನು ತಯಾರಿಸಲಾಗಿತ್ತು. ಬಾರ್ಸಿ ಲೈಟ್ ರೈಲ್ವೆಯು ಮೀರಜ್ ಮತ್ತು ಲಾತೂರ್ ನಡುವೆಯಿದ್ದ 325 ಕಿ.ಮೀ. ಉದ್ದದ ನ್ಯಾರೋಗೇಜ್ ರೈಲು ಮಾರ್ಗ. ಭಾರತದಲ್ಲಿ ನ್ಯಾರೋಗೇಜ್ ರೈಲ್ವೆಯಲ್ಲಿ ಕ್ರಾಂತಿಯನ್ನುಂಟು ಮಾಡಿರುವ ಬ್ರಿಟಿಷ್ ರೈಲ್ವೆ ಎಂಜಿನಿಯರ್ ಎವೆರಾರ್ಡ್ ಕ್ಯಾಲ್ಥ್ರಾಪ್ ಈ ಮಾರ್ಗವನ್ನು ನಿರ್ಮಿಸಿದ್ದರು. 1897ರಿಂದ ಉಗಿಬಂಡಿಗಳನ್ನು ಇದರ ಮೇಲೆ ಓಡಿಸಲಾಗುತ್ತಿತ್ತು. ಕ್ರಮೇಣ ಈ ಮಾರ್ಗವು ಭಾರತೀಯ ರೈಲ್ವೆ ಇಲಾಖೆಯ ಭಾಗವಾಯಿತು.

ಭಾರತದಲ್ಲಿ ಮೊದಲು ರೈಲನ್ನು ಸ್ವಾಗತಿಸಿದ ಹೆಗ್ಗಳಿಕೆಯು ಮಹಾರಾಷ್ಟ್ರದ ಥಾಣೆಗಿದೆ. ಅಂದಿನ ಬಾಂಬೆಯ ಬೋರಿಬಂದರ್‌ನಿಂದ ಥಾಣೆಯ ತನಕ ಸುಮಾರು 34 ಕಿ.ಮೀ. ದೂರದ ಮೊದಲ ಪ್ರಯಾಣಿಕ ರೈಲು ಸಂಚಾರವು 1853ರ ಏಪ್ರಿಲ್ 16ರಂದು ಆರಂಭವಾಗಿತ್ತು. ಅದರ ಸ್ಮರಣಾರ್ಥವಾಗಿ ಮತ್ತು ಭಾರತೀಯ ರೈಲ್ವೆಯು ನಡೆದು ಬಂದ ಹಾದಿಯ ಬಗ್ಗೆ ಪ್ರಯಾಣಿಕರಿಗೆ ಅರಿವು ಮೂಡಿಸಲು ಮುಂಬೈನ ಸ್ಥಳೀಯ ಸೆಂಟ್ರಲ್ ರೈಲ್ವೆ ಪ್ರಾಧಿಕಾರವು ಇದನ್ನು ಇಲ್ಲಿ ಪ್ರದರ್ಶನಕ್ಕೆ ಇರಿಸಿದೆ. ಈ ಪಾರಂಪರಿಕ ಉಗಿಬಂಡಿಯನ್ನು, '717' ಮತ್ತು 'ಸಿಆರ್' (ಸೆಂಟ್ರಲ್ ರೈಲ್ವೆ) ಗುರುತುಗಳೊಂದಿಗೆ ಹಸಿರು ಮತ್ತು ಕಪ್ಪು ಬಣ್ಣಗಳ ನಡುವೆ ಹಳದಿ ಪಟ್ಟೆಗಳ ಬಣ್ಣವನ್ನು ಹೊಸದಾಗಿ ಬಳಿದ ಬಳಿಕ, ಏಪ್ರಿಲ್ 01, 2021ರಂದು ಥಾಣೆಯಲ್ಲಿರಿಸಲಾಗಿದೆ.

**–ರಮಣ್ ಶೆಟ್ಟಿ ರೆಂಜಾಳ, ಮುಂಬೈ**

# ಅಲ್ಯುಮಿನಿಯಂ ಶಾಲಾ ಪೆಟ್ಟಿಗೆ



ಇಂದಿನ ಶಾಲಾ ಮಕ್ಕಳು ಬೆನ್ನಿಗೆ ಬಣ್ಣ ಬಣ್ಣದ ಸ್ಕೂಲ್ ಬ್ಯಾಗ್ (ಬಾಕ್ ಪ್ಯಾಕ್) ಹಾಕಿಕೊಂಡು ಹೋಗುವುದನ್ನು ನೋಡಿದಾಗ ಹಳೆಯ ತಲೆಮಾರಿನವರಿಗೆ ನೆನಪಾಗುವುದೇ ಅಂದು ತಾವು ಕೈಯಲ್ಲಿ ಹಿಡಿದು ಹೋಗುತ್ತಿದ್ದ ಈ ಅಲ್ಯುಮಿನಿಯಂ ಶಾಲಾ ಪೆಟ್ಟಿಗೆ. ಅಲ್ಯುಮಿನಿಯಂ ಲೋಹದಿಂದ ತಯಾರಿಸಿದ ಈ ಪೆಟ್ಟಿಗೆಯು ಹಗುರವಾಗಿರುತ್ತಿತ್ತು. ಗಟ್ಟಿ ಮುಟ್ಟಾಗಿದ್ದ ಈ ಪೆಟ್ಟಿಗೆಯು ಎಷ್ಟೇ ವರ್ಷ ಬಳಸಿದರೂ ಹಾಳಾಗುತ್ತಿರಲಿಲ್ಲ. ಮಳೆಗಾಲದಲ್ಲಿ ಪುಸ್ತಕಗಳು ನೆನೆಯದಂತೆ ರಕ್ಷಿಸಲು ಬಳಸುತ್ತಿದ್ದ ಈ ಪೆಟ್ಟಿಗೆಯನ್ನು ಶಾಲೆಯಲ್ಲಿ ಮತ್ತು ಮನೆಯಲ್ಲಿ ಬರೆಯಲು ಡೆಸ್ಕ್ ಆಗಿಯೂ ಬಳಸಲಾಗುತ್ತಿತ್ತು. ಎರಡು ಬದಿಯಲ್ಲಿ ಚಿಲಕ ಹಾಕುವ ವ್ಯವಸ್ಥೆ ಇದ್ದ ಈ ಪೆಟ್ಟಿಗೆಯಲ್ಲಿ ಬೆಲೆಬಾಳುವ ಲೇಖನ ಸಾಮಗ್ರಿಗಳನ್ನು ಇಟ್ಟು ಬೀಗ ಹಾಕಿಡಬಹುದಾಗಿತ್ತು.

ಶ್ರೀಮಂತರ ಮಕ್ಕಳು ಮಾತ್ರ ಈ ಪೆಟ್ಟಿಗೆಯನ್ನು ಬಳಸುತ್ತಿದ್ದರು. ಸಾಮಾನ್ಯ ವರ್ಗದ ಮಕ್ಕಳು ಬಟ್ಟೆಯ ಚೀಲಗಳನ್ನು ಬಳಸುತ್ತಿದ್ದರು. ಬೆಳ್ಳಿತೆರೆಯ ಹಳೆಯ ಚಲನಚಿತ್ರಗಳಲ್ಲಿ ಶಾಲಾ ಜೀವನವನ್ನು ತೋರಿಸುವಾಗ ಈ ಪೆಟ್ಟಿಗೆಗಳೂ ಕಾಣಿಸಿಕೊಳ್ಳುತ್ತಿದ್ದವು. ಬೇಬಿ ಇಂದಿರಾ ದ್ವಿಪಾತ್ರದಲ್ಲಿ ನಟಿಸಿದ 'ಮಕ್ಕಳ ಭಾಗ್ಯ' ಮತ್ತು ನೀತು ಸಿಂಗ್ ದ್ವಿಪಾತ್ರದಲ್ಲಿ ನಟಿಸಿದ 'ದೋ ಕಲಿಯಾಂ' ಚಿತ್ರಗಳಲ್ಲಿ ಈ ಪೆಟ್ಟಿಗೆಯನ್ನು ಬಳಸಿದ ಉದಾಹರಣೆಯಿದೆ.

**–ಶರದ ಕುಲಕರ್ಣಿ, ಬೀದರ್**



